# ಗಾರ್ಮೆಂಟ್ಸ್‌ನಲ್ಲಿ ದುಡಿಯುತ್ತಿದ್ದ 17 ವರ್ಷದ ರೂಪಾಳ ಕೊಲೆ ಎಂದು ಶಂಕಿಸಲಾದ ಸಾವಿಗೆ ಶ್ರದ್ಧಾಂಜಲಿ ಸಭೆ.

**ದಿನಾಂಕ : 16.04.2010**
**ಸಮಯ : ಸಂಜೆ 6.00 ರಿಂದ 7.30**
**ಸ್ಥಳ : ಟೌನ್‌ಹಾಲ್ ಬಳಿ, ಜೆ.ಸಿ ರಸ್ತೆ, ಬೆಂಗಳೂರು**

ಕಳೆದ ತಿಂಗಳು, ಮಾರ್ಚ್ 20 ಶನಿವಾರದಂದು ಬೆಂಗಳೂರಿನಲ್ಲಿರುವ ಗೋಲ್ಡನ್ ಸೀಮ್ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ 17 ವರ್ಷದ ರೂಪಾ ಎಂಬ ಯುವತಿಯನ್ನು ನಿಗೂಢರೀತಿಯಲ್ಲಿ ಸುಟ್ಟು ಹಾಕಲಾಗಿದೆ. ಸಂಬಂಧಪಟ್ಟ ಪೊಲೀಸರು ಈ ಕೇಸ್‌ಅನ್ನು ಭಾರತೀಯ ದಂಡ ಸಂಹಿತೆ ಸೆಕ್ಷನ್ 302 ಹಾಗೂ 201 ರ ಅಡಿಯಲ್ಲಿ ಕೊಲೆ ಎಂದು ದೂರು ದಾಖಲಿಸಿದ್ದಾರೆ.

ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳುವುದಕ್ಕಾಗಿ, ಮಾನವ ಹಕ್ಕುಗಳಿಗಾಗಿ ಹೋರಾಡುತ್ತಿರುವ **'ಸಿಕ್ರಮ್'** ಸಂಸ್ಥೆ ಹಾಗೂ ಕಾರ್ಮಿಕರ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ **'ಸಿವಿಡೆಪ್'** ಸಂಸ್ಥೆಯ ಕಾರ್ಯಕರ್ತರು ರೂಪಾಳ ಕುಟುಂಬ, ಅವಳ ಸಹೋದ್ಯೋಗಿಗಳು ಮತ್ತು ನೆರೆಹೊರೆಯವರನ್ನು ಭೇಟಿ ಮಾಡಿದ್ದಾರೆ. ಈ ಕೇಸ್‌ನ ಬಗ್ಗೆ ಶೀಘ್ರವಾಗಿ ತನಿಖೆ ನಡೆಸಬೇಕೆಂದು ಹಾಗೂ ಕೊಲೆ ಮಾಡಿದವರನ್ನು ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಲು ಮಹಿಳಾ ಹಕ್ಕುಗಳಿಗಾಗಿ ಕೆಲಸ ಮಾಡುವ **'ವಿಮೋಚನಾ'** ಸಂಸ್ಥೆಯ ಕಾರ್ಯಕರ್ತರು ಮತ್ತು ಇತರರು ಬೆಂಗಳೂರು ಪೊಲೀಸ್ ಸೂಪರ್‌ಇನ್‌ಟೆಂಡೆಂಟ್‌ರವರಾದ ಮಾನ್ಯ ಶ್ರೀ ಬಿ.ಎ ಮಹೇಶ್‌ರವನ್ನೂ ಸಹ ಭೇಟಿ ಮಾಡಿದ್ದಾರೆ.

ಕಳೆದ ಕೆಲವು ವರ್ಷಗಳಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಯುವತಿಯರ ಅಸಹಜ ಸಾವುಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇವೆ. 'ಅಮ್ಮು'ವಿನ ಶವ ಕಾರ್ಖಾನೆಯ ಶೌಚಾಲಯದಲ್ಲಿಯೇ ಸಿಕ್ಕಿತ್ತು, 'ರೇಣುಕಾ' ಕಾರ್ಖಾನೆಯಲ್ಲಿ ಆದ ಕಿರುಕುಳಕ್ಕಾಗಿ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಳು.

ಪ್ರತಿದಿನ, ಪ್ರತಿ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಪುರುಷ ಸೂಪರ್ ವೈಸರ್‌ಹಾಗೂ ಮ್ಯಾನೇಜರ್‌ಗಳ ಕೈ ಕೆಳಗೆ ದುಡಿಯುತಿರುವ ಮಹಿಳಾ ಕಾರ್ಮಿಕರು ಅವರಿಂದ ಹಲವಾರು ರೀತಿಯ ದೌರ್ಜನ್ಯಗಳನ್ನು ಎದುರಿಸುತ್ತಲೇ ಇದ್ದಾರೆ. ಬಟ್ಟೆಗಳನ್ನೇ ಕಾರ್ಮಿಕರ ಮುಖದ ಮೇಲೆ ಎಸೆಯುವುದು, ಅವರ ಕತ್ತು ಹಿಡಿದು ತಳ್ಳುವುದು, ಯಾವುದೇ ರೀತಿಯ ಪ್ರತಿಭಟನೆ ತೋರಿದರೆ, ಎಲ್ಲ ಕಾರ್ಮಿಕರ ಎದುರಿಗೆ ದಿನವಿಡೀ ನಿಲ್ಲಿಸುವುದು, 'ನಾಯಿ' 'ಕತ್ತೆ' 'ಗೂಬೆ' ಅಲ್ಲದೆ ಇತರ ಅವಾಚ್ಯ ಶಬ್ದಗಳಿಂದ ಬೈಯುವುದು ಈ ದೌರ್ಜನ್ಯಗಳ ಕೆಲವು ಉದಾಹರಣೆಗಳು.

ಪ್ರತಿದಿನ ಕಾರ್ಖಾನೆಗಳಲ್ಲಿ ಮ್ಯಾನೇಜರ್‌ಗಳು ಹಾಗೂ ಸೂಪರ್‌ವೈಸರ್‌ಗಳಿಂದ ಎದುರಿಸುವ ದೌರ್ಜನ್ಯಗಳು ಮತ್ತು ಕಾರ್ಮಿಕರ ಈ ರೀತಿಯ ಸಾವುಗಳಿಗೆ ಹತ್ತಿರದ ಸಂಬಂಧವಿದೆ ಎಂದು ನಮ್ಮ ನಂಬಿಕೆಯಾಗಿದೆ. ಬೆಂಗಳೂರಿನಲ್ಲಿರುವ 5 ಲಕ್ಷ ಕಾರ್ಮಿಕರಲ್ಲಿ 90 ಭಾಗ ಮಹಿಳೆಯರೇ ಆಗಿದ್ದಾರೆ. ಈ ರೀತಿಯ ದುರಂತಗಳಿಗೆ, ಅವರ ಬಡತನದ ವೇತನವೂ ಸಹ ಹತ್ತಿರದ ಸಂಬಂಧ ಹೊಂದಿದೆ., ಬಾಲ ಕಾರ್ಮಿಕ ಪದ್ಧತಿಯನ್ನು ಕಡ್ಡಾಯವಾಗಿ ರದ್ದು ಪಡಿಸಿದ್ದರೂ, ಇನ್ನೂ ಕಾರ್ಖಾನೆಗಳಲ್ಲಿ 18 ವರ್ಷಕ್ಕಿಂತ ಕಡಿಮೆ ಇರುವ ಹೆಣ್ಣುಮಕ್ಕಳು ಕಂಡು ಬರುತ್ತಿರುವುದು ಮತ್ತೊಂದು ಆತಂಕಕಾರೀ ಸಂಗತಿಯಾಗಿದೆ.

ದಿನಾಂಕ 16 ರಂದು ಮೇಣದ ಬತ್ತಿ ಬೆಳಗಿಸಿ ರೂಪಾಳ ಆತ್ಮಕ್ಕೆ ಸಾವಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ. ಇದು ಮಾತ್ರವಲ್ಲದೆ, ಸಾಮಾಜಿಕ ಸಂಘಟನೆಗಳಾದ ನಾವು ಮಹಿಳೆಯರ ಮೆಲಾಗುವ ದೌರ್ಜನ್ಯಗಳನ್ನು ಕೊನೆಗಾಣಿಸಲೇ ಬೇಕೆಂದು ಬಲವಾದ ನಿರ್ಣಯ ತೆಗೆದುಕೊಳ್ಳುತಿದ್ದೇವೆ. ನಮ್ಮ ಧ್ವನಿಯನ್ನು ಗಟ್ಟಿಗೊಳಿಸಲು ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.

ತಮ್ಮ ವಿಶ್ವಾಸಿಗಳು
ಯಮುನಾ, ಅಧ್ಯಕ್ಷರು, 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'

**ರತ್ನ,** ಕಾರ್ಯದರ್ಶಿಗಳು 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'

**ಗೋಪಿನಾಥ್ ಕೆ.ಪಿ** ಕಾರ್ಯದರ್ಶಿಗಳು, 'ಸಿವಿಡೆಪ್ – ಇಂಡಿಯಾ'